ಕೊಡಗು ವಿಶ್ವವಿದ್ಯಾಲಯ

**Kodagu University**

ಜ್ಞಾನಕಾವೇರಿ ಆವರಣ, ಚಿಕ್ಕ ಅಳುವಾರ, ತೊರೆನೂರು ಅಂಚೆ, ಕುಶಾಲನಗರ ತಾಲ್ಲೂಕು, ಕೊಡಗು – 571232

Jnanakaveri Campus, Chikka Aluvara, Thorenoor Post, Kushalnagar Tq, Kodagu – 571232

ಕುಲಸಚಿವರ ಕಾರ್ಯಾಲಯ

Office – 08276-276474

Fax – 08276 – 276478

E-Mail – registrarkodaguuniversity@gmail.com

No: KU/REG/2022-23/ 34

Date: 27.06.2023

## ಸುತ್ತೋಲೆ

ವಿಷಯ: 2022–23ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಹೊರತುಪಡಿಸಿ ಬೇರೆ ಪಿ.ಯು.ಸಿ ಬೋರ್ಡಗಳಿಂದ ಪಾಸಾದ ವಿದ್ಯಾರ್ಥಿಗಳಿಗೆ ಸ್ನಾತಕ ಕೋರ್ಸುಗಳಿಗೆ ಪ್ರವೇಶ ನೀಡುವ ಕುರಿತು.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಹೊರತುಪಡಿಸಿ ಬೇರೆ ಪಿ.ಯು.ಸಿ ಬೋರ್ಡಗಳಿಂದ ಪಾಸಾದ ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಕೋರ್ಸುಗಳಿಗೆ ನಿಯಮಾನುಸಾರ ಅರ್ಹತಾ ಪ್ರಮಾಣಪತ್ರವನ್ನು ಪಡೆದುಕೊಂಡು ಪ್ರವೇಶಾತಿಯನ್ನು ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಕರ್ನಾಟಕ ರಾಜ್ಯ ಹೊರತುಪಡಿಸಿ ಬೇರೆ ಪಿ.ಯು.ಸಿ ಬೋರ್ಡಗಳಿಂದ ಪಾಸಾದ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ಪಡೆಯದೆ ಪ್ರವೇಶಾತಿಯನ್ನು ಪಡೆದುಕೊಂಡಲ್ಲಿ ಆಯಾ ಮಹಾವಿದ್ಯಾಲಯಗಳ ಪ್ರಾಚಾರ್ಯರೇ ಹೊಣೆಗಾರರಾಗಿರುತ್ತಾರೆ ಹಾಗೂ ಇಂತಹ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯವು ಯಾವುದೇ ರೀತಿಯ ಹೊಣೆಗಾರಿಕೆ ಹೊಂದುವುದಿಲ್ಲ.

ಕೊಡಗು ವಿಶ್ವವಿದ್ಯಾಲಯ, ಜ್ಞಾನ ಕಾವೇರಿ ಆವರಣ ಚಿಕ್ಕ ಅಳುವಾರದಲ್ಲಿ ಅರ್ಹತಾ ಪ್ರಮಾಣ ಪತ್ರಗಳನ್ನು ದಿನಾಂಕ: 28/06/2023 ರಿಂದ ವಿತರಿಸಲಾಗುವುದು. ಆದ್ದರಿಂದ ಸಂಬಂಧಿಸಿದ ಮಹಾವಿದ್ಯಾಲಯದ ಅಭ್ಯರ್ಥಿಗಳು ಈ ಕೆಳಗಿನ ಮೂಲ ಹಾಗೂ ದೃಢೀಕೃತ ದಾಖಲೆಗಳನ್ನು ಕಡ್ಡಾಯವಾಗಿ ಹಾಜರುಪಡಿಸಿ ಅರ್ಹತಾ ಪ್ರಮಾಣ ಪತ್ರ ಪಡೆಯಲು ತಿಳಿಸಲಾಗಿದೆ.

1. ಎಸ್.ಎಸ್. ಎಲ್.ಸಿ ಅಂಕಪಟ್ಟಿ
2. 12ನೇ ತರಗತಿ ಅಂಕಪಟ್ಟಿ ಹಾಗೂ 10+2 ಅಂಕಪಟ್ಟಿ (ಉತ್ತೀರ್ಣರಾದ ಅಭ್ಯರ್ಥಿಗಳು ಫಲಿತಾಂಶದ ಪಟ್ಟಿ (Result Sheet) ಮೇಲೆ ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಿಂದ ಅಧಿಕೃತ ಸಹಿ ಹಾಗೂ ಮೊಹರು (Seal) ಪಡೆದುಕೊಳ್ಳುವುದು)
3. 10+2 ಉತ್ತೀರ್ಣರಾಗಿ 2 ಅಥವಾ ಅದಕ್ಕಿಂತ ಹೆಚ್ಚು ವರ್ಷ ವಿದ್ಯಾಭ್ಯಾಸ ಮೊಟಕುಗೊಳಿಸಿದ್ದಲ್ಲಿ 20/- ರೂಪಾಯಿಗಳ ಬಾಂಡ್ ಪೇಪರನ್ನು ಅಫಿಡವಿಟ್ ಮಾಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಅರ್ಹತಾ ಪ್ರಮಾಣ ಪತ್ರ ಪಡೆದುಕೊಳ್ಳುವುದು.
4. ಆಧಾರ್ ಕಾರ್ಡ ನಕಲು ಪ್ರತಿ
5. 2 Passport size ಫೋಟೋ

ಕುಲಸಚಿವರು (I/c)

ಕುಲಸಚಿವರು
ಕೊಡಗು ವಿಶ್ವವಿದ್ಯಾಲಯ
ಚಿಕ್ಕ ಅಳುವಾರ-571232
ಕುಶಾಲನಗರ ತಾ, ಕೊಡಗು, ಕರ್ನಾಟಕ